# 'ಸಂಗಮ' ಡಾ. ಸಿದ್ಧಯ್ಯ ಪುರಾಣಿಕ (ಕಾವ್ಯಾನಂದ) ಅವರ ಕವನ ಮತ್ತು ವಚನಗಳು

**ಸಂಗೀತ : ಕರ್ನಾಟಕ ಕಲಾಶ್ರೀ ಎಸ್. ಸೋಮಸುಂದರಂ**

## ಕವನಗಳು

### 1. ಹೊತ್ತಿತೋ ಹೊತ್ತಿತು

ರಾ : ಹಂಸ ನಂದಿ ತಾ : ಆದಿತಾಳ- ತ್ರಿಶ್ರ

1 3 2 2 3 .
ಆ : ಸರಿಗಮಧನಿಸ ಅ : ಸನಿಧಮಗರಿಸ

ಹೊತ್ತಿತೋ ಹೊತ್ತಿತು ಕನ್ನಡದ ದೀಪ
ಮುಗಿಯಿತೋ ಮುಗಿಯಿತು
ಶತಮಾನಗಳ ಶಾಪ
ಹೊತ್ತಿತೋ ಹೊತ್ತಿತು ಕನ್ನಡದ ದೀಪ!

ಕಣ್ಣು ಕುಕ್ಕಿಸುವಂತೆ ದೇದೀಪ್ಯಮಾನ
ಹರ್ಷವುಕ್ಕಿಸುವಂತೆ ಶೋಭಾಯಮಾನ
ಕನ್ನಡದ ಮನೆಯಾಗೆ ಜ್ಯೋತಿರ್ನಿಧಾನ
ಕನ್ನಡದ ಪ್ರಾಣ ಕನ್ನಡದ ಮಾನ
ಹೊತ್ತಿತೋ ಹೊತ್ತಿತು ಕನ್ನಡದ ದೀಪ!

ಕನ್ನಡದ ನನ್ನಿಗರ ಕಣ್ಣು ಬರ ಹಿಂಗೆ
ಕನ್ನಡದ ಮಣ್ಣು ಸಹ ಹೊರೆಯೇರಿ ಹೊಂಗೆ
ದಡಸೂಸಿ ಹರಿದಾಡೆ ಆ ಕೃಷ್ಣೆ ತುಂಗೆ
ಮೋದಾಂತರಂಗೆ ಶುಭ-ಮಂಗಲಾಂಗೆ
ಹೊತ್ತಿತೋ ಹೊತ್ತಿತು ಕನ್ನಡದ ದೀಪ!

..............................

ಉರಿವವರು ಬೇಕಿನ್ನು ಇದರೆಣ್ಣೆಯಾಗಿ
ಸುಡುವವರು ಬೇಕಿನ್ನು ನಿಡುಬತ್ತಿಯಾಗಿ
ಧರಿಸುವರು ಬೇಕಿದನು ಸಿರಿಹಣತೆಯಾಗಿ
ನನ್ನಿಯುಸಿರಾಗಿ ಧರ್ಮಕ್ಕೆ ಬಾಗಿ
ಹೊತ್ತಿತೋ ಹೊತ್ತಿತು ಕನ್ನಡದ ದೀಪ!

ಚಿರಕಾಲ ಬೆಳಗಲೀ ಕನ್ನಡದ ದೀಪ
ಜನಕೆಲ್ಲ ಬೆಳಕಾಗಿ ಪುಣ್ಯ ಪ್ರದೀಪ
ಭಾರತಕೆ ಬಲವಾಗಿ ಭವ್ಯ ಪ್ರದೀಪ
ಕಳೆಯುತ್ತ ತಾಪ ಬೆಳೆಸುತ್ತ ಸ್ನೇಪ
ಹೊತ್ತಿತೋ ಹೊತ್ತಿತು ಕನ್ನಡದ ದೀಪ!

### 2. ಕಾಡಿನ ಕವಿಗಳೆ

ರಾ : ವಾಸಂತಿ ತಾ : ಆದಿತಾಳ

2 3 1 .
ಆ : ಸರಿಗಪಧಸ ಅ : ಸದಪಗರಿಸ

ಕಾಡಿನ ಕವಿಗಳೆ ಓ ಕಲೆಗಾರರೆ
ಆಡಿರಿ ಹಾಡಿರಿ ನರ್ತಿಸಿರಿ!
ಕಲರವ ಮಂಜುಳ ಅಲೆಯಲೆಯಾಗಿರೆ
ಬನಶಂಕರಿಯನು ಕೀರ್ತಿಸಿರಿ!
ಗಿಳಿಗಳೆ ಅಳಿಗಳೆ ಕೋಕಿಲ ಕುಲಗಳೆ
ನಡೆಯಲಿ ನಿಮ್ಮಯ ವನಗಾನ!

..............................

ತೆಂಗಿನ ಗರಿ ತಲೆದೂಗಲಿ ಬಾಗಲಿ
ಗಿಡಮರಗಳು ಸಹ ನಲವೇರಿ!
ತಂಗಾಳಿಯು ಕೊಳಲೂದಲಿ ಸಾಗಲಿ

ಜೇನಿನ ಹುಳುಗಳು ಜೋಲಿಯ ಹೊಡೆಯಲಿ
ಕುಡಿಯುತ ಹೂವಿನ ಸವಿಗಳ್ಳ!
ತುಂಬಿಗಳುಲಿಯಲಿ ಕುಸುಮದ ಬಳಿಯಲಿ
ಚುಂಬನ ಭಿಕ್ಷೆಯ ಬೇಡುತಲಿ!

### 3. ಹಣತೆ ಹೊತ್ತಿಸೆ

ರಾ : ದುರ್ಗಾ ತಾ : ಮಿಶ್ರ ಛಾಪು

2 1 2
ಆ : ಸರಿಮಪಧಸ ಅ : ಸದಪಮರಿಸ

ಹಣತೆ ಹೊತ್ತಿಸೆ ಎಣ್ಣೆ ಇರದಿರೆ
ಹೊರಗೆ ಕತ್ತಲೆ ಕವಿಯಲಿ
ಕವಿಯದಿರಲ್ಲೆ ಕಾಳ ನಿನ್ನಯ
ಮನದ ಮಂತ್ರದ ಗವಿಯಲಿ

ಅಲ್ಲಿ ಆಶೆಯ ದೀಪ ಉರಿಯಲಿ
ಶ್ರದ್ಧೆ-ಸ್ನೇಹವ ಹೀರುತ
ಶುಕ್ಲ ಪಕ್ಷವ ಕೃಷ್ಣ ಪಕ್ಷವ
ಹಗಲು ರಾತ್ರಿಯ ಮೀರುತ

ಉಳಿದ ದೀಪಗಳೆಲ್ಲ ಭಾವಿಸೆ
ಶಿವನ ಹಂಗ್ಯೆ ಸೋದರ
ನಿನ್ನದೆನ್ನುವ ದೀಪವೊಂದೇ
ಅದುವೆ ಆಶೆಯು ಸೋದರ

..............................

ಯಾರ ಅಪ್ಪಣೆಗಾಗಿಯೂ ನೀ
ದಾರಿ ಕಾಯದೆ ಹೊತ್ತಿಸು
ಕಾಲವಿಧಿಗಳ ಕ್ರೂರ ಆಜ್ಞೆಯ
ಮೀರಿಯಾದರು ಹೊತ್ತಿಸು

ನಿನ್ನ ದೀಪವೆ ನಿನ್ನ ಸುಟ್ಟರೆ
ಸುಡಲಿ ಜ್ಯೋತಿಯ ಹೊತ್ತಿಸು
ಬರಿದೆ ಉರಿಯಲಿ ಕಿಚ್ಚ ಸುರಿಯಲಿ
ಗೊಡವೆಯೇತಕೆ ಹೊತ್ತಿಸು

### 4. ಬಾ ಮನ್ಮನೋಮಂದಿರಕೆ

ರಾ : ಶಿವರಂಜಿನಿ ತಾ : ಖಂಡ ಛಾಪು

2 2 2 .
ಆ : ಸರಿಗಪದಸ ಅ : ಸದಪಗರಿಸ

ಬಾ ಮನ್ಮನೋಮಂದಿರಕೆ ಪ್ರೇಮ ಪೂಜಾರಿ
ನಿನ್ನ ಮೂರ್ತಿಗೆ ನೀನೆ ನಮಿಸಲೆಂದು
ನಿನ್ನ ನಿಜವನು ನಿನ್ನ ನಿಲವ ನೀನರಿಯಲ್ಲಿ
ಪೂಜಾರಿಯೇ ಪೂಜ್ಯನಾಗಿ ನಿಂದು

ಯಾವ ಕೈ-ಸೋಂಕಿಗೂ ಯಾವ ಉಳಿ ಚಾಣಕೂ
ಹಂಗಾಗದೆಯೆ ಕಟ್ಟಿದೀ ಮಂದಿರ
ನಿನ್ನ ಮೂರುತಿ ಪಡೆದು ಧನ್ಯವಾಯಿತು ದೊರೆಯೆ
ನೀನಲ್ಲಿ ಶಿವ ಸತ್ಯ ಶುಭ ಸುಂದರ

..............................

ನಡೆವ ಗುಡಿಯಲಿ ನೀನು ನಡೆವ ಮೂರುತಿಯಾಗಿ
ನಡೆಯಲೇ ಬೇಕಲ್ತೆ ನಾ ನಡೆದ ಕಡೆಗೆ?
ನೀನೊಲ್ಲದಿದ್ದರೂ ನಾ ಬಿಡುವೆನೇ ನಿನ್ನ?

ನಂಬಿಗೆಯ ಸಾರಣೆಯ ಹಂಬಲದ ಕಾರಣೆಯ
ತನಿವಗೆಯ ತೋರಣವನನುಗೊಳಿಸಿಹೆ
ಬೇಗುದಿಯ ಸುಣ್ಣದಿಂ ಬಯಕೆಗಳ ಬಣ್ಣದಿಂ
ಮನಸಿನೀ ಮಂದಿರವ ಸಿಂಗರಿಸಿಹೆ

..............................

### 5. ಏಕೆ ಕುಣಿವೆ

ರಾ : ಕಾಮವರ್ಧಿನಿ ತಾ : ತ್ರಿಶ್ರ ಏಕತಾಳ

1 3 1 1 3 .
ಆ : ಸರಿಗಮಪಧನಿಸ
ಅ : ಸನಿಧಪಮಗರಿಸ

ಏಕೆ ಕುಣಿವೆ ತೂಕ ತಪ್ಪಿ ಸಾಕು ಕಾಲಭೈರವ
ನಾಕ ಹೋಗಿ ನರಕವಾಯ್ತು ಸಾಕುಮಾಡು ಸ್ವೈರವ
ಯಾವ ಪಾಪ ಗೈದುದಿಳೆಯು? ಸಾಕುಮಾಡು ವೈರವ
ಅದಿಗೆ ಸಿಕ್ಕು ಮುದುಡಿಹೋಯ್ತು ಮನುಜಲೋಕ
ಕೈರವ! ಏಕೆ ಕುಣಿವೆ....

ಎಲ್ಲಿ ಹೆಜ್ಜೆ ತಪ್ಪುತಿಹೆಯೊ ಎಲ್ಲಿ ಗೆಜ್ಜೆ ಹರಿದುದೊ
ಎಲ್ಲಿ ಒಜ್ಜೆ ಅಸಮವಾಯ್ತೊ ಎಲ್ಲಿ ಪಜ್ಜೆ ಸರಿದುದೊ
ಏನು ತಾಳ ತಪ್ಪುತಿಹುದೊ ಕುಣಿವ ಬಿಜ್ಜೆ
ಮರೆದುದೊ?
ಕುಣಿವುದನ್ನೆ ನಿಲ್ಲಿಸಿಹೆಯೊ ಬೇರೆ ಕಜ್ಜ ಕರೆದುದೊ?
ಏಕೆ ಕುಣಿವೆ....

..............................

ನೀನು ಹೆಜ್ಜೆ ಚೆಲ್ಲೆ ಹುಲ್ಲು ಹೂವು ಹಣ್ಣು ಬೆಳೆಯಲಿ
ನಿನ್ನ ಪಾದಸ್ಪರ್ಶದಿಂದ ಭೂಮಿ ಪುಳಕ ತಳೆಯಲಿ
ಸುತ್ತು ಸಸ್ಯವೃದ್ಧಿಯಾಗಿ ಕೊರತೆ ಹಸಿವೆಯಳಿಯಲಿ
ಹೊಟ್ಟೆಯ ಹೋರಾಟವಡಗಿ ಸತ್ಯ ಪ್ರೀತಿ
ಉಳಿಯಲಿ! ಏಕೆ ಕುಣಿವೆ....

ಯುಗಯುಗಗಳ ಹಗೆಯು ಹೋಗಿ ಸೊಗದಿ
ಬರಲಿ ಸಖ್ಯವು
ದೇಶ ದೇಶದಲ್ಲಿ ದುಃಖ ಹಿಂಗಿ ಬರಲಿ ಸೌಖ್ಯವು
ದ್ವೇಷರೋಷವಳಿದು ಬರಲಿ ಮನುಜ ಕುಲದ
ಐಕ್ಯವು
ಸತ್ಯ ಪ್ರೀತಿ ಶಾಂತಿಯಕ್ಕೆ ನಮ್ಮ ಭರತ ವಾಕ್ಯವು!
ಏಕೆ ಕುಣಿವೆ....

### 6. ಬಂದಿದೆ ಬಾ ಹೊಸದಿನ

ರಾ : ಮೋಹನ ತಾ : ಏಕತಾಳ

2 3 2 .
ಆ : ಸರಿಗಪಧಸ ಅ : ಸಧಪಗರಿಸ

ಬಂದಿದೆ ಬಾ ಹೊಸದಿನ
ಮೈವೆತ್ತಿಹ ಹೊಸತನ!
ತಿಳಿಯಾದವು ಬಾನು ಬಯಲು
ತಿಳಿಯಾದವು ಕಾನು ಹೊನಲು
ನೀವು ತಿಳಿಯಾಗಿರೆನುತ
ಸಾರ ಬಂದ ಚಾರಣ-
ವನವು ಕೊನರಿ ಬಳ್ಳಿ ಮಲರಿ
ಅಣುರೇಣುವಿನೆದೆಯು ಅಲರಿ

ಬಂದಿದೆ ಬಾ ಹೊಸದಿನ!

.................................

ಜಗ ಪ್ರಾಕ್ತನ ಜಡ ಪ್ರಾಕ್ತನ
ಜೀವಸೃಷ್ಟಿ ಚಿರ ನವೀನ
ನೂತನತೆಯು ನೋಟದಲ್ಲಿ
ನೋಡು ತೆರೆದು ಲೋಚನ
ಕುಹೂ ಕುಹೂ ಒಹೋ ಒಹೋ
ಕುಹೂ ಕುಹೂ ಕೋಗಿಲೆ

ಮೌನವ್ರತವ ನೀಗೆಲೆ ರಾಗಯೋಗಿಯಾಗೆಲೆ

.................................

ಬೇವು ಮಾವು ನಗುತಿರೆ ನಾವು ಹಿಗ್ಗಿ ನಗದಿರೆ
ದೇವ ಮೆಚ್ಚ ಬನ್ನಿರೆ ಸ್ವಾಗತಿಸಲು ಹೊಸದಿನ
'ಶಾರ್ವರಿ'ಯ ಜನ್ಮದಿನ

## 7. ಯಾವ ಹೂಗಳ

ರಾ : ಸಾರಂಗ ತಾ : ಮಿಶ್ರಾ ಛಾಪು

2 2 2 3 .
ಆ : ಸ ರಿ ಸ ಪಾ ಮ ಪ ಧಾ ನಿ ಸಾ
. 3 2 2 2 3 1 2
ಅ : ಸ ನಿ ಧಾ ಪ ಮ ರೀ ಗ ಮ ರಿ ಸ

ಯಾವ ಹೂಗಳ ಎಸಳುಗಳೊ ಇವು
ಯಾವ ಹಕ್ಕಿಯ ಗರಿಗಳೊ

ಯಾವ ತೆನೆಗಳ ಕಾಳುಗಳೊ ಇವು
ಯಾವ ಹೊನಲಿನ ತೆರೆಗಳೊ

ಇಡಿಯ ಹೂವುಗಳಲ್ಲ ಮುಡಿಯಲು
ಚವರಿಯಲ್ಲವು ಹಿಡಿಯಲು

ರಾಶಿಯಲ್ಲಿವು ಹಿಗ್ಗಿ ಪಡೆಯಲು
ಸಲಿಲವಲ್ಲಿವು ಕುಡಿಯಲು

ಸುರಿಯಲಿರವಿನ ಚರಣತಲದಲಿ
ಮೆರೆಯಲಿರುಹಿನ ಕರದಲಿ

ಬಾಳ ಗುಬ್ಬಿಗೆ ಗುಟುಕಿವಾಗಲಿ
ಬಾಳ ತೊರೆಯಲಿ ಹರಿಯಲಿ.

## 8. ಹೂವ ಮುಡಿದು

ರಾ : ಮಾಂಡ್ ತಾ : ತ್ರಿಶ್ಯ ಆದಿ

3 1 2 . . 3 2
ಆ : ಸ ಗ ಮ ಪ ದ ಸ ಅ : ಸ ನಿ ಧ ಪ ಮ ಗ ರಿ ಗ ಸ

ಹೂವ ಮುಡಿದು ಒಂದು ಹೆಡಿಗೆ
ತತ್ತರಿಸುತಿರಲು ನಡಿಗೆ
ಒನಪು ಸೂಸೆ ಅಡಿಗೆ ಅಡಿಗೆ
ಹೊರಟೆ ಬೆಂಗಳೂರ ಹುಡಿಗೆ ಯಾವ ಕಡೆಗೆ?

ಮುಗಿಲ ಬಿಲ್ಲು ಉಟ್ಟ ಉಡಿಗೆ
ಮಯೂರ ಪಂಖ ತೊಟ್ಟ ತೊಡಿಗೆ
ಮುದುಕರೆದೆಯು ಸಹಿತ ನಡುಗೆ
ಹೊರಟೆ ಬೆಂಗಳೂರ ಹುಡಿಗೆ ಯಾವ ಕಡೆಗೆ?

.................................

ಮಗಮಗಿಸಲು ನಡೆದ ಹಾದಿ
ಝುಗಝುಗಿಸಲು ಹೊರಟ ಬೀದಿ
ಧಗಧಗಿಸಲು ಜನದ ವನಧಿ
ಹೊರಟೆ ಶುದ್ಧ ಹುಡುಗಿತನದಿ ಎತ್ತ ನಡೆದಿ?

ಬರಿದ ಹೂವೊ ಇಂದ್ರವನದಿ
ಇಳೆಯ ಹೆಣ್ಣೊ ಇವಳು ನಿಜದಿ?
ಹೊರಟೆ ಅಚ್ಚ ಹರೆಯ ಹುಡುಗಿ ಎತ್ತ ನಡೆದಿ?

## 9. ಪ್ರಕೃತಿಯೇ ಗುರು

ರಾ : ಭಾಗ್ಯಶ್ರೀ ತಾ : ಮಿಶ್ರ ಛಾಪು

2 1 2 2
ಆ : ಸ ಗ ಮ ಧ ನಿ ಸ
2
ಅ : ಸ ನಿ ಧ ಮ ಪ ಧ ಮ ಗ ರಿ ಸ

ಪ್ರಕೃತಿಯೇ ಗುರು ಗಗನ ಲಿಂಗವು
ಜಗವೆ ಕೂಡಲ ಸಂಗಮ
ಹುಡಿಯೆ ಭಸ್ಮವು ಹುಲ್ಲೆ ಪತ್ರಿಯು
ಜಡವಿದೆಲ್ಲವು ಜಂಗಮ

ಕುಡಿವ ನೀರೇ ತೀರ್ಥ ತಿನ್ನುವ
ರೊಟ್ಟಿ ಶಿವನ ಪ್ರಸಾದವು
ಶ್ರಮದ ಬೆಮರೇ ಸ್ನಾನ ದುಡಿತದ
ಹಾಡೆ ಮಂತ್ರನಿನಾದವು

ಭದ್ರವನ್ನೇ ನೋಳ್ಪ ಅಕ್ಷಿಯೆ
ಭಾವಿಸಲು ರುದ್ರಾಕ್ಷಿಯು
ಭದ್ರವನ್ನೇ ನುಡಿವೆ ಮಾಡುವೆ-
ನೆಂಬ ಬುದ್ಧಿಯೆ ದೀಕ್ಷೆಯು

ಸರ್ವವೂ ಶಿವನಂಶವೆನ್ನುವ
ಧರ್ಮವೊಂದೇ ಧರ್ಮವು
ಅನ್ಯರನು ಅಳಲಿಸದ ಹಿತಕರ
ಕರ್ಮವೊಂದೇ ಕರ್ಮವು

ಎಲ್ಲರೆಲ್ಲರಿಗಾಗಿಯೆನ್ನುವ
ಜ್ಞಾನವೊಂದೇ ಜ್ಞಾನವು
ಒಲಿದು ಒಲಿಸುವ ನಲಿದು ನಲಿಸುವ
ಕಲೆಯೆ ಅಮೃತನಿಧಾನವು

ಉಣಿಸಿ ಉಣ್ಣುವ ಭಾವ ಭಕ್ತಿಯು
ಒಲ್ಲೆನೆನೆ ಸುವಿರಕ್ತಿಯು
ಕೂಡಿ ಕಲಿಯಲು ಕೂಡಿ ಬೆಳೆಯಲು
ಕೂಡಿ ನಲಿಯಲು ಮುಕ್ತಿಯು

## 10. ಹಣ್ಣಿನಲಿ ಬೆಣ್ಣೆಯಲಿ

ರಾ : ಕೇದಾರ ತಾ : ಆದಿ ತ್ರಿಶ್ಯ

1 3 1 3
ಆ : ಸ ಮ ಗ ಮ ಪ ನೀ ಸ
2
ಅ : ಸ ನಿ ಪ ಮ ಮಾ ಗ ರಿ ಸ

ಹಣ್ಣಿನಲಿ ಬೆಣ್ಣೆಯಲಿ ಕೆನೆಮೊಸರು ಹಾಲಿನಲಿ
ಕಂದದಲಿ ಜೇನಿನಲಿ ರಸಗಬ್ಬು ಬಾಳೆಯಲಿ
ಎಳನೀರು ಹೋಳಿನೀರು ಹಾಲ್ದೆನೆಯ ಕಾಳಿನಲಿ
ಸಾರುತಿದೆ ಸೃಷ್ಟಿಯಿದು ಸವಿಯಾಗಿ ನಿಂದು-
“ಸವಿಯಾಗು, ಸವಿಯಾಗು, ಸವಿಯಾಗು!” ಎಂದು.

ತಾರೆಯಲಿ ಚಂದ್ರನಲಿ ಸೂರ್ಯನಲಿ ರನ್ನದಲಿ
ಕಂಚಿನಲಿ ಮಿಂಚಿನಲಿ ಮುತ್ತಿನಲಿ ಚಿನ್ನದಲಿ
ಜ್ಯೋತಿಯಲಿ ನಯನದಲಿ ಉಷೆಯ ಹೊಂಬಣ್ಣದಲಿ
ಸಾರುತಿದೆ ಸೃಷ್ಟಿಯದೆ ಛವಿಯಾಗಿ ನಿಂದು-
“ಛವಿಯಾಗು, ಛವಿಯಾಗು, ಛವಿಯಾಗು!” ಎಂದು.

ಶಬ್ದದಲಿ ಸವಿಯಾಗಿ ಅರ್ಥದಲಿ ಬೆಳಕಾಗಿ
ಬಾಳ ಭವ್ಯತೆಗಿಲ್ಲಿ ಬೆಳಕು ಸವಿ ಸಾಕಾಗಿ
ಸಾರುತಿದೆ ಸೃಷ್ಟಿ ಸವಿಛವಿಯಾಗಿ ನಿಂದು-
“ಕವಿಯಾಗು, ಕವಿಯಾಗು, ಕವಿಯಾಗು!” ಎಂದು

## 11. ಮೊದಲು ಮಾನವನಾಗು

ರಾ : ಹಿಂದೋಳ ತಾ : ಖಂಡ ಛಾಪು

2 1 1 2 .
ಆ : ಸ ಗ ಮ ಧ ನಿ ಸ ಅ : ಸ ನಿ ಧ ಮ ಗ ಸ

ಓದಿ ಬ್ರಾಹ್ಮಣನಾಗು ಕಾದಿ ಕ್ಷತ್ರಿಯನಾಗು
ಶೂದ್ರ ವೈಶ್ಯನೆ ಆಗು ದುಡಿದು ಗಳಿಸಿ
ಏನಾದರೂ ಆಗು ನಿನ್ನೊಲವಿನಂತಾಗು
ಏನಾದರೂ ಸರಿಯೇ-
ಮೊದಲು ಮಾನವನಾಗು !

ಹಿಂದು ಮುಸ್ಲಿಮನಾಗು ಬೌದ್ಧ ಕ್ರೈಸ್ತನೆ ಆಗು
ಚಾರ್ವಾಕನೇ ಆಗು ಭೋಗ ಬಯಸಿ
ಏನಾದರೂ ಆಗು ಹಾರೈಸಿದಂತಾಗು
ಏನಾದರೂ ಸರಿಯೆ,
ಮೊದಲು ಮಾನವನಾಗು !

ರಾಜಕಾರಣಿಯಾಗು ರಾಷ್ಟ್ರಭಕ್ತನೆ ಆಗು
ಕಲೆಗಾರ ವಿಜ್ಞಾನಿ ವ್ಯಾಪಾರಿಯಾಗು
ಏನಾದರೂ ಆಗು ನೀ ಬಯಸಿದಂತಾಗು
ಏನಾದರೂ ಸರಿಯೇ
ಮೊದಲು ಮಾನವನಾಗು !

## 12. ಕೋಲು ಸಖಿ

ರಾ : ಮಾಂಡ ತಾ : ಆದಿತಾಳ ತ್ರಿಶ್ಯ

3 1 2 .
ಆ : ಸ ಗ ಮ ಪ ದ ಸ
3 2
ಅ : ಸ ನಿ ಧ ಪ ಮ ಗ ರಿ ಗ ಸ

ಕೋಲು ಸಖಿ ಶಾಂತಮುಖಿ
ಕೋಲು ಕೋಲು ತಾರೆ!
ಸುಗ್ಗಿಯೊಳು ಹಿಗ್ಗಿನೊಳು
ತೇಲು ತೇಲು ಬಾರೆ!

ಬರಡು ಬನವು ಚಿಗಿತು ಬಳ್ಳಿ ಮೊಗ್ಗೆ ಮೊಗ್ಗೆ ಹೇರೆ
ಮಾಗಿ ಹೋಗಿ ಸುಗ್ಗಿ ಬಂತು ಹಿಗ್ಗಿ ಹೊರಗೆ ಬಾರೆ
ಈಸು ದಿನವು ಒಳಗೆ ಕುಳಿತೆ ಇನ್ನು ಮೊಗವ ತೋರೆ
ಕೋಲು ಸಖಿ......

.........................................

ಹೊಸತು ಬಾಳು ಹೊಸತು ಕುಣಿತ ಕುಣಿದು ಕುಣಿದು ಬಾರೆ
ಜೀವರದೆಯ ದೇವನಡಿಗೆ ಮಣಿದು ಮಣಿದು ಬಾರೆ
ಬಾಳ ರಸದ ಕೋಶದಿಂದ ಜೇನ ಹನಿಯ ತಾರೆ
ಕೋಲು ಸಖಿ......

ಮೊದಲ ಚೆಲುವೆ ಮತ್ತೆ ಹೊಸತು ಸೊಬಗ ಬೀರಿ ಬಾರೆ
ಹೃದಯದೊಲವೆ ಮತ್ತೆ ಹೊಸತು ಸೊಗವ ತೋರಿ ಬಾರೆ
ಇಳೆಯ ಎದೆಯ ನಲವೆ ಮತ್ತೆ ಚಿಮ್ಮಿ ತೂರಿ ಬಾರೆ
ಕೋಲು ಸಖಿ......

## 13. ಇಂದಿನೀ ದಸರೆಯೊಳು

ರಾ : ಕಲ್ಯಾಣಿ ತಾ : ಆದಿತಾಳ

2 3 2 2 3 .
ಆ : ಸ ರಿ ಗ ಮ ಪ ದ ನಿ ಸ
.
ಅ : ಸ ನಿ ದ ಪ ಮ ಗ ರಿ ಗ ಸ

ಇಂದಿನೀ ದಸರೆಯೊಳು ಪ್ರಥಮ ಪೂಜೆಯು ನಿನಗೆ

ಭಗವತಿಯೆ ಭಾರತಿಯೆ ಭುವನ ವಂದಿತ ಮಾತೆ
ಚಾಮುಂಡಿ ಶ್ರೀದೇವಿ ಗೌರಿ ವಾಗೀಶ್ವರಿಯೆ

..........................................

ಕಬ್ಬಿಣದ ಸರಪಳಿಯು ಬಿಗಿದ ಕಾಲ್ಗಳೊಳಿಂದು
ಸ್ವಾತಂತ್ರ್ಯ ನೂಪುರದ ಝುಣಝುಣತ್ಕಾರ
ದಾಸ್ಯ ಶೃಂಖಲೆ ಬಿಗಿದ ವರದ ಹಸ್ತದೊಳಿಂದು
ವೇದ-ವೀಣೆಯ ಮೃದುಲ ಮಧುರ ಝುಂಕಾರ

ಮತ್ತೆ ಮಸ್ತಕದಲ್ಲಿ ಸಮತೆ ಶಾಂತಿಯ ಮುಕುಟ
ಮತ್ತೆ ಮುಖದಲಿ ಮಧುರ ಮಂದಹಾಸ
ಮತ್ತೆ ಹಿಮಗಿರಿಶಿರದಿ ಧರ್ಮಚಕ್ರಧ್ವಜವು
ಮತ್ತೆ ಕಡಲಲೆಯಲ್ಲಿ ವಿಜಯ ಘೋಷ

..........................................

ಹಂಗಿನಮೃತಕ್ಕಿಂತ ತಂಗುಳನ್ನವು ಲೇಸು
ಎಂದು ನಮ್ಮನೆ ನಾವು ನಂಬಿರುವೆವು
ಎಂಥ ಬಿರಿ ಬಂದರೂ ಅನ್ಯರಂಕಿತ ಬೇಡ
ಎಂಬ ನಿರ್ಧಾರದಲಿ ಮುಂಬರಿವೆವು

## 14. ನೂರು ಸಲ

ರಾ : ಚಾರುಕೇಶಿ ತಾ : ಆದಿತಾಳ

2 3 1 1 2
ಆ : ಸ ರಿ ಗ ಮ ಪ ಧ ನಿ ಸ ಅ : ಸ ನಿ ಧ ಪ ಮ ಗ ರಿ ಸ

ನೂರು ಸಲ ಜುಮ್ಮೆನುವುದೀ ಮನ
ಒಮ್ಮೆ ಕೋಗಿಲೆ ಕೂಗಲು
ವಿರಹಶ್ರುತಿ ಹಿಡಿದೆದೆಯ ತಂತಿಗೆ
ಕುಕಿಲಿನಂಗುಲಿ ತಾಗಲು!

ಮುಗ್ಧಮೌನವು ಸ್ನಿಗ್ಧಗೇಯದಿ
ಸ್ವರ-ಸುರಾಂಗನೆಯಾಗಲು
ಎದೆಯ ತೊಟ್ಟಿಲದಲ್ಲಿ ಪ್ರಿಯಸಖಿ
ಮಧುರ ರೂಪವು ತೂಗಲು!

ಸುಪ್ತಪ್ರಣಯದ ಗುಪ್ತಗಾಮಿನಿ
ತಪ್ತವಾಹಿನಿಯಾಗಲು
ರೂಪರಾಣಿಯ ಸೊಕ್ಕು ಮುರಿಯುತ
ಪ್ರೇಮಪ್ರಭುವಿಗೆ ಬಾಗಲು

..........................................

ಕೂಗು ಕೂಗೆಲೆ ರಾಗಯೋಗಿಯೆ
ಬೇಗೆ ಹೊತ್ತಲಿ ಬಗೆಯಲಿ!
ದಗ್ಧ ಹೃದಯದ ಶುದ್ಧ ಕ್ಷೇತ್ರದಿ
ಮಿಲನಮಾಧವಿ ಚಿಗಿಯಲಿ!

## 15. ಹೂವ ತರಲಿಲ್ಲೆ

ರಾ : ಮಣಿರಂಗ ತಾ : ಮಿಶ್ರ ಛಾಪು

2 1 1 2 2
ಆ : ರಿ ಮ ಮ ಪ ನಿ ನಿ ಸ

2
ಅ : ಸ ನಿ ಪ ಮ ಗ ರಿ ರಿ ಸ

ಹೂವ ತರಲಿಲ್ಲೆಂದ ನಲ್ಲೆಗೆ ಯಾವ ಉತ್ತರ ಹೇಳಲಿ?

ಹೂಗಳೇತಕೆ ಹೂವಿಗೆಂಬೆನು ಯಾಕೆ ಸುಳ್ಳನು ಹೇಳಲಿ?

ಯಾವುದಿದೆ ಹೂ ಪೇಟೆಯೊಳು ಸಖಿ
ನಿನ್ನೊಳೇ ಮೊದಲಿಲ್ಲದ?

ನಿನ್ನೊಳಿವೆ ಜಗದೆಲ್ಲ ಹೂಗಳು ನಾನು ಭಾವಿಸೆ ಪಟ್ಟದ!

ನಿನ್ನ ಮೂಗಿನ ಸಂಪಿಗೆಗೆ ಸಮನಾದ ಸಂಪಿಗೆಯೆಲ್ಲಿದೆ?

ತುಟಿ ಗುಲಾಬಿಯು, ಕಣ್ಣುಕ್ಕೋರಕ
ಮುಖವೆ ಕಮಲವು ಮಾನಿನಿ

ನಗೆಯೆ ಮಲ್ಲಿಗೆ ಕೆನ್ನೆ ಕೇದಗೆ ರದನ ಕುಂದುವು ಕಾಮಿನಿ

ನೀ ಸಚೇತನ ಪುಷ್ಪವನ ಸಖಿ ಏಕೆ ಹೂಗಳ ಬಯಸುವಿ?

ಹೂಗಳೊಡನೆಯೆ ಸ್ಪರ್ಧೆ ನಡೆದರೆ
ನೀನೆ ಹೂಗಳ ಜಯಿಸುವಿ!

ಮುಖದ ಕಮಲದಿ ಕಣ್ಣ ನೈದಿಲ ಅದರೊಳೀ ಕೆಂದಾವರೆ!

ಏನು ಮೋಡಿಯು ಎಂಥ ಗಾಡಿಯು
ಮತ್ತೆ ಹೂಗಳ ತರುವರೆ?

ಮುನಿಸ ಬಿಡು ಬಾ ತೊಡಿಸು ಕೊರಳಿಗೆ
ಕರ-ಶಿರೀಷದ ಮಾಲೆಯ

ಮನದ ಆರಡಿ ಅದರ ಮಧುರಸ
ಕುಡಿದು ಹೊಡೆಯಲಿ ಜೋಲಿಯ.

# ವಚನಗಳು

## 16. ಕಡೆದರೆ ಬೆಣ್ಣೆ

ರಾ : ಮಿಶ್ರ ತಿಲಂಗ ತಾ : ಆದಿತಾಳ

3 1 2
ಆ : ಸ ಗ ಮ ಪ ನಿ ಸ

3
ಅ : ಸ ನಿ ಪ ಮ ಗಾ ಮ ರಿ ಸ

ಕಡೆದರೆ ಬೆಣ್ಣೆ, ಕಟೆದರೆ ಮೂರ್ತಿ,
ಒಸ್ಕಿದರೆ ಕಾಳು, ಹಿಸ್ಕಿದರೆ ಕೇಶಗಳಯ್ಯ;
ಅಟ್ಟರೆ ಅಡುಗೆ, ಸುಟ್ಟರೆ ಭಸ್ಮ
ನೆಟ್ಟರೆ ಸಸಿ, ಇಟ್ಟರೆ ಒಡವೆಗಳಯ್ಯ;
ಉರಿದರೆ ದೀಪ, ಉರಿಸಿದರೆ ಧೂಪ,
ತೆಯ್ದರೆ ಗಂಧ, ನೆಯ್ದರೆ ವಸ್ತ್ರವಯ್ಯ;
ಸ್ವತಂತ್ರಧೀರ ಸಿದ್ಧೇಶ್ವರಾ,
ತಾಳಿದರೆ ಬಾಳು, ದುಡಿದರೆ ಪಾಲು,
ಕೀಳೊಪ್ಪೆ ಮೇಲು, ಕೊಡದಿಹುದೆ ಹಾಳು ಕಂಡಯ್ಯ

## 17. ಭಾರತದ ಭವ್ಯ ದಿವ್ಯ

ರಾ : ಅಭೇರಿ ತಾ : ಖಂಡ ಛಾಪು

2 1 2
ಆ : ಸ ಗ ಮ ಪ ನಿ ಸ

2 2
ಅ : ಸ ನಿ ಧ ಪ ಮ ಗ ರಿ ಸ

ಭಾರತದ ಭವ್ಯ ದಿವ್ಯ ದೇಗುಲಕ್ಕೆ
ಹಿಮಗಿರಿಯೇ 'ಮಹತೋ ಮಹೀಯಾನ್'
ಗೋಪುರ,
ಉತ್ತುಂಗ ಶೃಂಗಗಳೇ ಸಾಲು ಕಳಸಗಳು!
ಸಂಜೆ ಮುಂಜಾವಿನಲ್ಲಿ ಸ್ವರ್ಣ ಕಳಸಗಳಾಗಿ,
ಬಿಸಿಲು ಬೆಳ್ದಿಂಗಳಲ್ಲಿ ರಜತ ಕಳಸಗಳಾಗಿ,
ಹತ್ತಿರ ಹೋದವರಿಗೆ ಹಿಮ ಕಳಸಗಳಾಗಿ
ಕಂಗೊಳಿಸುವ ಈ ಶೃಂಗ-ಕಲಶಗಳು
ಸಾರುತ್ತಿವೆ ಪ್ರಪಂಚಕ್ಕೆ-
ಔನ್ನತ್ಯ ಸಂಹಿತೆಯ, ಪಾವಿತ್ರ್ಯ ಸಂದೇಶವ,
ಅವಿನಾಶಿತ್ವದ ಅಂತರ್ವಾಣಿಯ-
ಸ್ವತಂತ್ರಧೀರ ಸಿದ್ಧೇಶ್ವರಾ!

## 18. ನೀನು ಹರಿ, ನೀನು ಹರ

ರಾ : ಕಲಾವತಿ ತಾ : ಆದಿ ತ್ರಿಶ್ರ

2 2
ಆ : ಸ ಗ ಮ ಧ ನಿ ಸ ಅ : ಸ ನಿ ಧ ಪ ಗ ಸ

ನೀನು ಹರಿ, ನೀನು ಹರ,
ನೀನು ಸಿದ್ಧ, ನೀನು ಬುದ್ಧ
ನೀನು ಯಹ್ವ, ನೀನು ಮಜ್ದ
ನೀನು ತಾವೊ, ನೀನು ದೇವ,
ನೀನು ಅಲ್ಲಾ, ನೀನು ಎಲ್ಲಾ,
ನೀನು ಸಾರ್ವನಾಮಿಕ, ನೀನು ಅನಾಮಿಕ,
ನೀನು ಸರ್ವಗತ, ನೀನು ಸರ್ವಭರಿತ
ನೀನು ಅನುಪಮೇಯ, ನೀನು ನಿರಾಮಯ
ನೀನು ಸ್ವತಂತ್ರಧೀರ ಸಿದ್ಧೇಶ್ವರಾ!

## 19. ಸಮುದ್ರವೆ ನೀರಡಿಕೆಯೆಂದರೆ

ರಾ : ಸಿಂಹೇಂದ್ರ ಮಧ್ಯಮ ತಾ : ಆದಿತಾಳ

2 2 2 1 3
ಆ : ಸ ರಿ ಗ ಮ ಪ ಧ ನಿ ಸ

ಅ : ಸ ನಿ ಧ ಪ ಮ ಗ ರಿ ಸ

ಸಮುದ್ರವೇ ನೀರಡಿಕೆಯೆಂದರೆ
ಅದಕ್ಕೆ ನೀರು ಕುಡಿಸುವವರಾರಯ್ಯಾ?
ಹಿಮಾದ್ರಿಯೇ ನನಗೆ ನೆಗಡಿಯೆಂದರೆ
ಅದರ ಮೂಗನೊರಸುವವರಾರಯ್ಯಾ?
ಸೂರ್ಯನೇ ನನಗೆ ಸೆಕೆಯೆಂದರೆ
ಅವನಿಗೆ ಗಾಳಿ ಹಾಕುವವರಾರಯ್ಯಾ?
ಚಂದ್ರನೇ ನನಗೆ ಚಳಿಯೆಂದರೆ
ಅವನಿಗೆ ಕಂಬಳಿ ಹೊದಿಸುವವರಾರಯ್ಯಾ?
ನೆಲವೇ ನನಗೆ ಹಸಿವೆಯೆಂದರೆ
ಅದಕ್ಕೆ ಅಶನವೀಯುವವರಾರಯ್ಯಾ?
ಸ್ವತಂತ್ರಧೀರ ಸಿದ್ಧೇಶ್ವರಾ,
ಮಹಾತ್ಮಗೇ ಮನ್ನಣೆಯ ದಾಹ ಅಂಟಿದರೆ
ಅದನ್ನು ನಿವಾರಿಸುವವರು ಯಾರಯ್ಯಾ?

## 20. ನನ್ನ ಅಂತರಂಗದ ಮೇಲೆ

ರಾ : ಹಂಸ ಧ್ವನಿ ತಾ : ಆದಿತಾಳ

2 3 3
ಆ : ಸ ರಿ ಗ ಪ ನಿ ಸ ಅ : ಸ ನಿ ಪ ಗ ರಿ ಸ

ನನ್ನ ಅಂತರಂಗದ ಮೇಲೆ ನರ್ತಿಸಲು
ನಿರಾಕಾರ ನಟರಾಜನಾಗಿ ಬಾ ;
ನನ್ನ ಮನದ ವನದ ಕುಂಜ ಕುಂಜಗಳಲ್ಲಿ ಕೊಳಲೂದಲು
ಅಶರೀರ ಮುರಲೀಧರನಾಗಿ ಬಾ;
ನನ್ನೆದೆಯ ಮೇಲೆ ಬೀಜಾಕ್ಷರಗಳನ್ನು ಬರೆಯಲು
ಬಯಲ ಬ್ರಹ್ಮನಾಗಿ ಬಾ;
ನನ್ನ ಇರವಿಗೆ ವಾತ್ಸಲ್ಯರಸವನ್ನೆರೆಯಲು
ನಿಜ ಭಾವ ಗೌರಿ, ಸದ್ಬುದ್ಧಿ ಶಾರದೆಯಾಗಿ ಬಾ;
ಎಲ್ಲ ರೂಪಗಳಲ್ಲಿ ಬಾ, ಎಲ್ಲ ಎಲ್ಲವಾಗಿ ಬಾ,
ಎಲ್ಲ ಕಾಲದಲ್ಲಿ ಬಾ, ಬಾ, ಬಾ, ಬಾ-
ಸ್ವತಂತ್ರಧೀರ ಸಿದ್ಧೇಶ್ವರಾ!

## 21. ಕಾಗದವು ಒಂದೇ

ರಾ : ಖಮಾಜ ತಾ : ತ್ರಿಶ್ರ ಆದಿ

1 3 2 2
ಆ : ಸ ಮ ಗ ಮ ಪ ಧ ನಿ ಸ

2
ಅ : ಸ ನಿ ಧ ಪ ಮ ಗ ರಿ ಸ

ಕಾಗದವು ಒಂದೇ-ಚಿತ್ರಗಾರನ ಕೈಗೆ ಸಿಕ್ಕರೆ ಚಿತ್ರವಾಗುತ್ತದೆ,

ಕವಿಯ ಕೈಗೆ ಸಿಕ್ಕರೆ ಪದ್ಯವಾಗುತ್ತದೆ,
ಪೆದ್ದನ ಕೈಗೆ ಸಿಕ್ಕರೆ ರದ್ದಿಯಾಗುತ್ತದೆ,
ಮಗುವಿನ ಕೈಗೆ ಸಿಕ್ಕರೆ ಮುದ್ದೆಯಾಗುತ್ತದೆ;
ನರಜನ್ಮ ಒಂದೇ-
ಭೋಗಿಯಾದರೆ ಅವ ವಿಷಯಾಸಕ್ತ,
ವೀತರಾಗನಾದರೆ ವಿರಕ್ತ,
ಹೆಣ್ಣು ಹೊನ್ನು ಮಣ್ಣಿನೊಳಗಾದರೆ ಅನುರಕ್ತ,
ನಿನಗೆ ಒಳಗಾದರೆ ಭಕ್ತ ನೋಡಾ-
ಸ್ವತಂತ್ರಧೀರ ಸಿದ್ಧೇಶ್ವರಾ!

## 22. ನಡೆಯದ ಹಾದಿಯಲ್ಲಿ

ರಾ : ಮಾಯಾ ಮಾಳವ ಗೌಡ    ತಾ : ಆದಿತಾಳ

ಆ : ಸ ರಿ ಗ ಮ ಪ ಧ ನಿ ಸ (1 3 1 1 3)

ಅ : ಸ ನಿ ಧ ಪ ಮ ಗ ರಿ ಸ

ನಡೆಯದ ಹಾದಿಯಲ್ಲಿ ಎಡವಿದೆನೆಂದರೆ
ಒಪ್ಪುವುದೆ ಅಯ್ಯಾ?
ಕಾಣದ ಮುಖದ ಕುಂದನೆಣಿಸಿದರೆ
ಒಪ್ಪುವುದೆ ಅಯ್ಯಾ?
ಉಣ್ಣದ ಅಡಿಗೆಯ ರುಚಿಯ ಟೀಕಿಸಿದರೆ
ಒಪ್ಪುವುದೆ ಅಯ್ಯಾ?
ನೋಡದುದನ್ನು ನೋಡಿದಂತೆ ವರ್ಣಿಸಿದರೆ
ಒಪ್ಪುವುದೆ ಅಯ್ಯಾ? ಸ್ವತಂತ್ರಧೀರ ಸಿದ್ಧೇಶ್ವರಾ,
ಕಾಣದ ನಿನ್ನ ಕಂಡಂತೆ ಬಣ್ಣಿಸಿದರೆ
ಒಪ್ಪುವುದೆ ಅಯ್ಯಾ?

## 23. ಮುಂಬೆಳಕು ಬೆಂಬೆಳಕು

ರಾ : ಧರ್ಮವತಿ    ತಾ : ಖಂಡ ಛಾಪು

ಆ : ಸ ರಿ ಗ ಮ ಪ ಧ ನಿ ಸ (2 2 2 2 3)

ಅ : ಸ ನಿ ಧ ಪ ಮ ಗ ರಿ ಸ

ಮುಂಬೆಳಕು, ಬೆಂಬೆಳಕು, ಹೊಂಬೆಳಕು, ಹೂ-ಬೆಳಕು,
ತುಳುಕಿತೋ ತುಳುಕಿತು ಎಲ್ಲೆಡೆಗೆ ಬೆಳಕು!
ಎಂಥ ದೃಷ್ಟಿ ಸಂಜೀವಿನೀ ಬೆಳಕು,
ಚೈತನ್ಯದಾಯಿನೀ ಬೆಳಕು,
ಹರ್ಷೋತ್ಸಾಹ ಸಂವರ್ಧಿನೀ ಬೆಳಕು!
ನಿನ್ನ ಈ ಬಂಗಾರ ಬೆಳಕಿನಲ್ಲಿ
ನನ್ನ ಮೈಬಣ್ಣದ ಬಗ್ಗೆ ನನಗೇ ಕೌತುಕ,
ನನಗೆ ನಾನೇ ಮೋಹಕ
ಸ್ವತಂತ್ರಧೀರ ಸಿದ್ಧೇಶ್ವರ!

## 24. ಒಂದಿಲ್ಲೊಂದು ಕೊರತೆ

ರಾ : ದೇಶ    ತಾ : ಮಿಶ್ರ ಛಾಪು

ಆ : ಸ ರಿ ಮ ಪ ನಿ ಸ (2 1 3)

ಅ : ಸ ನಿ ಧ ಪ ಮ ಗ ರಿ ಗ ರೀ ನಿ ಸ (2 2 1 2 2 2)

ಒಂದಿಲ್ಲೊಂದು ಕೊರತೆ
ಕೊರೆಯುತ್ತಿರುತ್ತದೆ ಎಲ್ಲರಲ್ಲಿಯೂ;
ಒಂದಿಲ್ಲೊಂದು ಆಶಾದೀಪ
ಉರಿಯುತ್ತಿರುತ್ತದೆ ಎಲ್ಲರಲ್ಲಿಯೂ;
ಒಂದಿಲ್ಲೊಂದು ಸದ್ಗುಣ
ಮಿನುಗುತ್ತಿರುತ್ತದೆ ಎಲ್ಲರಲ್ಲಿಯೂ;
ಒಂದಿಲ್ಲೊಂದು ದುರ್ಗುಣ
ಜಿನುಗುತ್ತಿರುತ್ತದೆ ಎಲ್ಲರಲ್ಲಿಯೂ.
ಒಂದೂ ಸುಗುಣವಿಲ್ಲದವ ಮನುಷ್ಯನೇ ಅಲ್ಲ,
ಒಂದೂ ದುರ್ಗುಣವಿಲ್ಲದವ ಮನುಷ್ಯನಲ್ಲ-
ನೀನೇ, ಸ್ವತಂತ್ರಧೀರ ಸಿದ್ಧೇಶ್ವರ!

## 25. ನನ್ನ ಸ್ಮರಣೆಯ

ರಾ : ಕಾಫಿ    ತಾ : ಆದಿತಾಳ

ಆ : ಸ ರಿ ಮ ಪ ನಿ ಸ (2 1 3)

ಅ : ಸ ನಿ ಧ ನಿ ಪ ಮ ಗ ರಿ ಸ ನಿ ಸ (2 2 2 1 2 2 3)

ನನ್ನ ಸ್ಮರಣೆಯ ಭರಣಿಗಳಲ್ಲಿ
ನಿನ್ನ ನಾಮದ ಜೇನು ತುಂಬಲಯ್ಯ;
ನನ್ನ ತೊದಲ್ನುಡಿಗಳ ತತ್ರಾಣಿಗಳಲ್ಲಿ
ನಿನ್ನ ಗುಣಗಾನದ ಗಂಗಾಜಲ ತುಂಬಲಯ್ಯ;
ನನ್ನ ಕನಸುಗಳ ಕುಸುಮಗಳಲ್ಲಿ
ನಿನ್ನ ಕೀರ್ತಿಯ ಕಂಪು ತುಂಬಲಯ್ಯ;
ನನ್ನ ಸುಷುಪ್ತಿಯ ಕಸುಗಾಯಿಗಳಲ್ಲಿ
ನಿನ್ನ ಅರಿವಿನ ಅಮೃತ ತುಂಬಲಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ,
ನನ್ನ ರೋಮ-ರಂಧ್ರಾಕ್ಷಿಗಳಲ್ಲಿ
ನಿನ್ನ ತ್ರಿವಿಧರೂಪ ತುಂಬಲಯ್ಯ!

## 26. ನೀನು ವಿಶ್ವತೋಮುಖ

ರಾ : ಖೀರವಾಣಿ    ತಾ : ಆದಿ ತೃಶ್ಯ

ಆ : ಸ ರಿ ಗ ಮ ಪ ಧ ನಿ ಸ (2 2 1 1 3)

ಅ : ಸ ನಿ ಧ ಸ ಮ ಗ ರಿ ಸ

ನೀನು ವಿಶ್ವತೋಮುಖನಿರುವೆಯಾಗಿ
ನಾನು ನೋಡುವ ಎಲ್ಲ ಮುಖಗಳೂ ನಿನ್ನ ಮುಖಗಳೇ;
ನೀನು ಭಕ್ತದೇಹಿಕ ದೇವನಾಗಿ
ನನಗೆ ಕಾಣುವ ಎಲ್ಲ ದೇಹಗಳೂ ನಿನ್ನ ದೇಹಗಳೇ,
ಜಗದ ಜೀವವೇ ನೀನಾಗಿರುವೆಯಾಗಿ
ಜಗದ ಜೀವಿಗಳೆಲ್ಲ ನಿನ್ನ ಜೀವಂಶಗಳೇ;
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನು ಸರ್ವಭರಿತ; ಅರಿತರೆ ನಾನೂ ನಿನ್ನಿಂದ ಭರಿತ!

## 27. ನಿನ್ನ ಕರುಣೆಯ

ರಾ : ರೇವತಿ    ತಾ : ಮಿಶ್ರ ಛಾಪು

ಆ : ಸ ರಿ ಮ ಪ ನಿ ಸ (1 1 2)    ಅ : ಸ ನಿ ಪ ಮ ರಿ ಸ

ನಿನ್ನ ಕರುಣೆಯ ಬಯಲಿನಲ್ಲಿ
ಪುಟ್ಟ ಪಟವಾಗುವಾಸೆ;
ನಿನ್ನ ವಾತ್ಸಲ್ಯದ ವಾರಿಧಿಯಲ್ಲಿ
ಮರಿ ಮೀನಾಗುವಾಸೆ;
ನಿನ್ನ ಕೃಪೆಯ ಆಗಸದಲ್ಲಿ
ಚಿಕ್ಕ ನಕ್ಷತ್ರವಾಗುವಾಸೆ;
ಸ್ವತಂತ್ರಧೀರ ಸಿದ್ಧೇಶ್ವರಾ
ನಿನ್ನ ನಲ್ಮೆಯ ಮುನ್ನೀರಣುಗನ
ತಣ್ಣದಿರಾಗುವಾಸೆ!

## 28. ಅವರಿವರು ಕೇಡು

ರಾ : ಅಹೀರ ಭೈರವಿ    ತಾ : ಖಂಡ ಛಾಪು

ಆ : ಸ ರಿ ಗ ಮ ಪ ದ ನಿ ಸ (1 3 1 2 2)

ಅ : ಸ ನಿ ಧ ಪ ಮ ಗ ರಿ ಸ

ಅವರಿವರು ಕೇಡು ಮಾಡಿದರೆಂದು
ಮಾನವ ದ್ವೇಷಿಯಾಗದಿರು ಮನವೆ;
ಅವರಿವರು ಮೋಸಗೊಳಿಸಿದರೆಂದು
ಸಂಶಯ ಪಿಶಾಚಿಯಾಗದಿರು, ಮನವೆ;
ಅವರಿವರು ಅಡಿಕೊಂಡರೆಂದು
ನಿಂದಕ, ದೂಷಕನಾಗದಿರು, ಮನವೆ;
ಸ್ವತಂತ್ರಧೀರ ಸಿದ್ಧೇಶ್ವರನ
ಕಳ್ಳ ಭಕ್ತರೇ ಸುತ್ತುವರಿದರೆಂದು
ಅವನನ್ನೇ ತೊರೆಯಬೇಡ, ಮನವೆ!

## 29. ಸ್ವತಂತ್ರಧೀರ ಸಿದ್ಧೇಶ್ವರ

ರಾ : ಸಿಂಧು ಭೈರವಿ    ತಾ : ಆದಿತಾಳ

ಆ : ಸ ರಿ ಗ ಮ ಧಾ ನಿ ಸ (2 2 1 2 3)

ಅ : ಸ ನಿ ಧ ಪ ಮ ಗ ರೀ ಸ (2)

ಸ್ವತಂತ್ರಧೀರ ಸಿದ್ಧೇಶ್ವರ,
ಸ್ವತಂತ್ರಧೀರ ಸಿದ್ಧೇಶ್ವರ,
ಸ್ವತಂತ್ರಧೀರ ಸಿದ್ಧೇಶ್ವರ-
ಕೇಳಿಸದೆ ನನ್ನ ಆರ್ತಸ್ವರ?
ನನ್ನ ಸ್ನಾಯುಗಳ ಸಜೀವ ತಂತ್ರಿಗಳು ಮಿಡಿಯುತ್ತಿವೆ,
ನನ್ನ ಕರುಳುಗಳ ಸುರುಳಿ ತಂತಿಗಳು ನುಡಿಯುತ್ತಿವೆ,
ನನ್ನ ರಕ್ತದ ಕಣಕಣವೂ ತುಡಿಯುತ್ತಿವೆ;
ಕೇಳಿಸದೆ ನಿನಗೆ
ಆ ಅಸಂಖ್ಯ ತಂತ್ರೀ ಶೋಕ ಸ್ವರ?
ಪರಮಾಣುಗಳೆಲ್ಲ ಕಿವಿಯಾಗಿಯೂ
ನೀನು ಬಧಿರ?

## 30. ಹೂವಿನ ಗಂಧ

ರಾ : ಶ್ರೀ ರಂಜನಿ    ತಾ : ಆದಿತಾಳ-ತೃಶ್ಯ

ಆ : ಸ ರಿ ಗ ಮ ಧ ನಿ ಸ (2 2 1 2 2)

ಅ : ಸ ನಿ ಧ ಮ ಗ ರಿ ಸ

ಹೂವಿನ ಗಂಧ ಹಾರಿ ಹೋಗಬಹುದಾಗಲಿ
ಗಂಧದ ಮರದ ಗಂಧ ಹಾರಿ ಹೋಗವುದೇನಯ್ಯಾ?
ಎಣ್ಣೆಯ ದೀಪ ಆರಿ ಹೋಗಬಹುದಾಗಲಿ
ರತ್ನದ ದೀಪ ಆರಿ ಹೋಗವುದೇನಯ್ಯಾ?
ಬಳಿದ ಬಣ್ಣ ತೊಳೆದು ಹೋಗಬಹುದಾಗಲಿ
ಮೈ ತಳೆದ ಬಣ್ಣ ತೊಳೆದುಹೋಗವುದೇನಯ್ಯಾ?
ಸ್ವತಂತ್ರಧೀರ ಸಿದ್ಧೇಶ್ವರಾ,
ಶ್ರೇಷ್ಠ ಕೃತಿಕಾರನ ಜೀವನ ಮುಗಿದು ಹೋಗಬಹುದಾಗಲಿ
ಶ್ರೇಷ್ಠ ಕೃತಿಯ ಜೀವನ ಮುಗಿದು ಹೋಗುವುದೇನಯ್ಯಾ?

ರಾ : ರಾಗ

ತಾ : ತಾಳ

ಆ : ಆರೋಹಣ

ಅ : ಅವರೋಹಣ